All India Radio: Bangalore
National Bulletin In Kannada
14.08.2026 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

---

ಮುಖ್ಯಾಂಶಗಳು

೧. ಸ್ವಾತಂತ್ರ್ಯೋತ್ಸವದ ಮುನ್ನಾದಿನವಾದ ಇಂದು ದೇಶವನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

೨. ಇಂದು 'ವಿಭಜನೆಯ ಭೀಕರತೆಗಳ ಸಂಸ್ಮರಣಾ ದಿನ' - ದೇಶಾದ್ಯಂತ ಸಂತ್ರಸ್ತರಿಗೆ ಗೌರವ ನಮನ

೩. ನ್ಯಾಯಾಂಗದಲ್ಲಿ ಪಾರದರ್ಶಕತೆಗೆ ಸರ್ವೋಚ್ಚ ನ್ಯಾಯಾಲಯ ಬದ್ಧ – ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್

೪. ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಶಿಪ್; ಒಟ್ಟು ೩೫ ಪದಕಗಳೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದ ಭಾರತ

---

೮೦ನೇ ಸ್ವಾತಂತ್ರ್ಯ ದಿನೋತ್ಸವದ ಮುನ್ನಾದಿನವಾದ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ರಾಷ್ಟ್ರಪತಿಯವರ ಈ ವಿಶೇಷ ಭಾಷಣ ಇಂದು ಸಂಜೆ ೭ ಗಂಟೆಗೆ ಆಕಾಶವಾಣಿಯ ಎಲ್ಲಾ ತರಂಗಾಂತರಗಳಲ್ಲಿ ಪ್ರಸಾರವಾಗಲಿದೆ.

ಇದರ ಜೊತೆಗೆ ದೂರದರ್ಶನದ ಎಲ್ಲಾ ವಾಹಿನಿಗಳಲ್ಲಿ ಮೊದಲು ಹಿಂದಿಯಲ್ಲಿ ಹಾಗೂ ತದನಂತರ ಇಂಗ್ಲಿಷ್‌ನಲ್ಲಿ ಪ್ರಸಾರವಾಗಲಿದೆ. ದೂರದರ್ಶನದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷಣಗಳ ಪ್ರಸಾರದ ನಂತರ, ದೂರದರ್ಶನದ ಪ್ರಾದೇಶಿಕ ವಾಹಿನಿಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಭಾಷಣ ಪ್ರಸಾರವಾಗಲಿದೆ.

ಇನ್ನು ಆಕಾಶವಾಣಿಯು ರಾತ್ರಿ ೯:೩೦ ಕ್ಕೆ ತನ್ನ ಪ್ರಾದೇಶಿಕ ಜಾಲಗಳಲ್ಲಿ ಭಾಷಣದ ಪ್ರಾದೇಶಿಕ ಭಾಷಾ ಅವತರಣಿಕೆಗಳನ್ನು ಪ್ರಸಾರ ಮಾಡಲಿದೆ.

---

ಇಂದು 'ವಿಭಜನೆಯ ಭೀಕರತೆಗಳ ಸಂಸ್ಮರಣಾ ದಿನ' ಇದರ ಹಿನ್ನೆಲೆಯಲ್ಲಿ, ೧೯೪೭ ರ ದೇಶ ವಿಭಜನೆಯ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡ ಹಾಗೂ ಅಪಾರ ಯಾತನೆ ಅನುಭವಿಸಿದ ಲಕ್ಷಾಂತರ ಜನರಿಗೆ ರಾಷ್ಟ್ರ ಗೌರವ ನಮನ ಸಲ್ಲಿಸುತ್ತಿದೆ. ಈ ಅಂಗವಾಗಿ ರಾಜಧಾನಿ ನವದೆಹಲಿ ಸೇರಿದಂತೆ ದೇಶದಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ದೇಶ ವಿಭಜನೆಯಿಂದಾಗಿ ತಮ್ಮ ನೆಲ-ಮೂಲಗಳನ್ನು ಕಳೆದುಕೊಂಡು ಪ್ರಾಣತ್ಯಾಗ ಮಾಡಿದವರ ಸ್ಮರಣಾರ್ಥ, ಪ್ರತಿವರ್ಷ ಆಗಸ್ಟ್ ೧೪ ರಂದು ಈ ದಿನವನ್ನು ಆಚರಿಸಲು ಭಾರತ ಸರ್ಕಾರ ೨೦೨೧ ರಲ್ಲಿ ನಿರ್ಧರಿಸಿತ್ತು. ಕೋಟ್ಯಂತರ ಜನರಿಗೆ ಮಾಸದ ಗಾಯಗಳನ್ನು ನೀಡಿದ ಭೀಕರ ವಿಭಜನೆಯೊಂದಿಗೆ ಪ್ರಜಾಪ್ರಭುತ್ವ ಭಾರತದ ಉದಯವಾಯಿತು ಎಂಬುದನ್ನು ಮುಂಬರುವ ಪೀಳಿಗೆಗೆ ನೆನಪಿಸುವುದು ಈ ಆಚರಣೆಯ ಮುಖ್ಯ ಉದ್ದೇಶವಾಗಿದೆ.

ಸಮಾಜದಲ್ಲಿರುವ ಕೋಮು ದ್ವೇಷ ಹಾಗೂ ಅಸಾಮರಸ್ಯವನ್ನು ತೊಡೆದುಹಾಕಿ, ದೇಶದ ಏಕತೆ, ಸಾಮಾಜಿಕ ಸೌಹಾರ್ದತೆ ಮತ್ತು ಮಾನವ ಸಬಲೀಕರಣವನ್ನು ಗಟ್ಟಿಗೊಳಿಸುವ ಅಗತ್ಯವನ್ನು ಈ ದಿನ ನೆನಪಿಸುತ್ತದೆ.

ಮಾನವ ಇತಿಹಾಸದಲ್ಲೇ ಅತಿ ದೊಡ್ಡ ವಲಸೆಗಳಲ್ಲಿ ಒಂದಾದ ಈ ವಿಭಜನೆಯು ಸುಮಾರು ೨ ಕೋಟಿ ಜನರ ಜೀವನದ ಮೇಲೆ ಪರಿಣಾಮ ಬೀರಿತ್ತು. ಸ್ವಾತಂತ್ರ್ಯದ ಸಂಭ್ರಮದ ನಡುವೆಯೂ, ವಿಭಜನೆಯ ಹಿಂಸಾಚಾರಕ್ಕೆ ಪ್ರಾಣ ಕಳೆದುಕೊಂಡ ಅಮಾಯಕರ ತ್ಯಾಗವನ್ನು ದೇಶ ಇಂದು ಕೃತಜ್ಞತೆಯಿಂದ ಸ್ಮರಿಸುತ್ತಿದೆ.

ವಿಭಜನೆಯ ಭೀಕರತೆಗಳ ಸಂಸ್ಮರಣಾ ದಿನ'ದ ಮುನ್ನಾದಿನವಾದ ನಿನ್ನೆ ನವದೆಹಲಿಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭಾಗವಹಿಸಿದ್ದರು.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಅವರು, ೧೯೪೭ ರ ದೇಶ ವಿಭಜನೆಯ ಭೀಕರ ಯಾತನೆ ಹಾಗೂ ಅಪಾರ ನಷ್ಟವನ್ನು ಎದುರಿಸಿದ ಜನರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಹಾಗೂ ದೇಶದ ಏಕತೆ, ಅಖಂಡತೆ ಹಾಗೂ ಸಾಮಾಜಿಕ ಸೌಹಾರ್ದತೆಯನ್ನು ನಿರಂತರವಾಗಿ ಬಲಪಡಿಸಲು ಸರ್ಕಾರ ಬದ್ಧವಾಗಿದೆ ಎಂದು ಸಚಿವರು ಪ್ರತಿಪಾದಿಸಿದರು.

---

ನ್ಯಾಯಾಂಗ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಸುಪ್ರೀಂ ಕೋರ್ಟ್ ಬದ್ಧವಾಗಿದ್ದು, ಕಲಾಪಗಳ ನೇರ ಪ್ರಸಾರವೇ ಇದಕ್ಕೆ ಸಾಕ್ಷಿ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಸೂರ್ಯ ಕಾಂತ್ ಹೇಳಿದ್ದಾರೆ. ಆದರೆ, ನೇರ ಪ್ರಸಾರವನ್ನು ಕೆಲವೊಮ್ಮೆ ದುರುಪಯೋಗಪಡಿಸಿಕೊಳ್ಳುತ್ತಿರುವುದು ವಿಷಾದನೀಯ ಎಂದು ಅವರು ಡಿಡಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ನೇರ ಪ್ರಸಾರದ ತುಣುಕುಗಳನ್ನು ಆಯ್ದುಕೊಂಡು, ನ್ಯಾಯಮೂರ್ತಿಗಳ ಹೇಳಿಕೆಗಳನ್ನು ಸಂದರ್ಭಕ್ಕೆ ಹೊರತಾಗಿ ಬಿಂಬಿಸುತ್ತಿರುವ ಉದಾಹರಣೆಗಳು ಗಮನಕ್ಕೆ ಬಂದಿವೆ ಎಂದ ಅವರು, ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ಸಮಾಜದಲ್ಲಿ ಸೌಹಾರ್ದತೆ ಕಾಪಾಡಲು ಶ್ರಮಿಸಬೇಕೆಂದು ಮನವಿ ಮಾಡಿದರು.

ನ್ಯಾಯಾಂಗ ಸುಧಾರಣೆಯು ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಜಿಲ್ಲಾ ನ್ಯಾಯಾಲಯಗಳು ಈ ಸುಧಾರಣೆಯ ಮೊದಲ ಹಂತವಾಗಿವೆ. ಹೀಗಾಗಿ ಜಿಲ್ಲಾ ನ್ಯಾಯಾಲಯಗಳನ್ನು ಬಲಪಡಿಸುವುದು ಹಾಗೂ ಅಲ್ಲಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸುವುದು ಅತ್ಯಗತ್ಯ ಎಂದರು.

---

ರಕ್ಷಣಾ ಉತ್ಪಾದನಾ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಾರ್ವಜನಿಕ ವಲಯದ ಉದ್ಯಮವಾದ ಇಂಡಿಯಾ ಆಪ್ಟೆಲ್ ಲಿಮಿಟೆಡ್, ಸಿವಿಲ್ ಮಾರುಕಟ್ಟೆಗಾಗಿ ಸ್ವದೇಶಿ 'ಗರುಡ' ಹೈ ರೆಸಲ್ಯೂಷನ್ ಬೈನಾಕ್ಯುಲರ್ ಅನ್ನು ನಿನ್ನೆ ಬಿಡುಗಡೆ ಮಾಡಿದೆ.

ಸ್ವದೇಶಿ ವಿನ್ಯಾಸ ಮತ್ತು ತಯಾರಿಕೆಯ ಮೂಲಕ 'ಆತ್ಮನಿರ್ಭರ ಭಾರತ'ದ ಆಶಯವನ್ನು ಗರುಡ ಪ್ರತಿಬಿಂಬಿಸುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

೮ ಪಟ್ಟು ವರ್ಧನೆ ಹಾಗೂ ೭.೬ ಡಿಗ್ರಿ ವಿಶಾಲ ವೀಕ್ಷಣಾ ವ್ಯಾಪ್ತಿಯನ್ನು ಹೊಂದಿರುವ ಈ ಬೈನಾಕ್ಯುಲರ್ ದೂರದ ವಸ್ತುಗಳನ್ನು ಸ್ಪಷ್ಟವಾಗಿ ವೀಕ್ಷಿಸಲು ನೆರವಾಗಲಿದೆ.

ಪಕ್ಷಿ ವೀಕ್ಷಣೆ, ವನ್ಯಜೀವಿ ವೀಕ್ಷಣೆ, ಪ್ರಕೃತಿ ಅನ್ವೇಷಣೆ, ಪ್ರವಾಸ, ಕ್ರೀಡೆ, ಅರಣ್ಯ ಮತ್ತು ಸಾಗರ ಚಟುವಟಿಕೆಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗರುಡವನ್ನು ಬಳಸಬಹುದಾಗಿದೆ ಎಂದು ಸಚಿವಾಲಯ ತಿಳಿಸಿದೆ.

---

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಹರ್ ಘರ್ ತಿರಂಗಾ' ಅಭಿಯಾನದಡಿ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಇಂದು ಬೃಹತ್ ತ್ರಿವರ್ಣ ಧ್ವಜ ರ್‍ಯಾಲಿ ಆಯೋಜಿಸಲಾಗಿದೆ.

ಕೋಲಾರ್ ಸಿಕ್ಸ್-ಲೇನ್ ರಸ್ತೆಯ ಮದರ್ ತೆರೆಸಾ ಶಾಲೆ ಬಳಿಯಿಂದ ಬೆಳಿಗ್ಗೆ ೧೦ ಗಂಟೆಗೆ ಆರಂಭವಾಗುವ ಈ ರ್‍ಯಾಲಿಯು, ಸುಮಾರು ೩೨ ಕಿಲೋಮೀಟರ್ ಸಾಗಿ ಸಂತ ನಗರದ ಭೈಸಾ ಖೇಡಿ ಮಂಡಿಯಲ್ಲಿ ಮುಕ್ತಾಯಗೊಳ್ಳಲಿದೆ.

---

ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿಸಲು ಪ್ರಮುಖ ಕ್ಷೇತ್ರಗಳ ಕುರಿತು ಸಿದ್ಧಪಡಿಸಲಾದ ವರದಿಯನ್ನು ನೀತಿ ಆಯೋಗದ ಉಪಾಧ್ಯಕ್ಷ ಅಶೋಕ್ ಕುಮಾರ್ ಲಹಿರಿ ನಿನ್ನೆ ಬಿಡುಗಡೆ ಮಾಡಿದರು.

ಜಾಗತಿಕ ಸ್ಪರ್ಧಾತ್ಮಕತೆ, ದೇಶೀಯ ಮೌಲ್ಯವರ್ಧನೆ, ಉದ್ಯೋಗ ಸೃಷ್ಟಿ ಮತ್ತು ಜಾಗತಿಕ ಪೂರೈಕೆ ಸರಪಳಿಗಳಲ್ಲಿ ಹೆಚ್ಚಿನ ಏಕೀಕರಣಕ್ಕೆ ೧೨ ಕ್ಷೇತ್ರಗಳು ಹೆಚ್ಚಿನ ಸಾಮರ್ಥ್ಯ ಹೊಂದಿವೆ ಎಂದು ವರದಿಯಲ್ಲಿ ಗುರುತಿಸಲಾಗಿದೆ.

ವಾಹನ, ಎಲೆಕ್ಟ್ರಾನಿಕ್ಸ್, ಉಕ್ಕು, ಬಂಡವಾಳ ಸರಕುಗಳು, ರಕ್ಷಣಾ ಮತ್ತು ಡ್ರೋನ್‌ಗಳು, ರಾಸಾಯನಿಕ, ಸೌರ ವಿದ್ಯುತ್, ಜವಳಿ, ಔಷಧ ಮತ್ತು ವೈದ್ಯಕೀಯ ಸಾಧನಗಳು, ದೂರಸಂಪರ್ಕ ಉಪಕರಣಗಳು, ಚರ್ಮ ಮತ್ತು ಪಾದರಕ್ಷೆಗಳು ಹಾಗೂ ಆಹಾರ ಸಂಸ್ಕರಣಾ ಕ್ಷೇತ್ರಗಳನ್ನು ಪ್ರಮುಖ ಕ್ಷೇತ್ರಗಳಾಗಿ ಗುರುತಿಸಲಾಗಿದೆ.

ಜಾಗತಿಕ ಪೂರೈಕೆ ಸರಪಳಿಗಳನ್ನು ವೈವಿಧ್ಯಗೊಳಿಸುವ ಪ್ರಯತ್ನಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ವರದಿಯು ಭಾರತದ ಉತ್ಪಾದನಾ ವ್ಯವಸ್ಥೆಯನ್ನು ಬಲಪಡಿಸಲು ನೀತಿ ನಿರೂಪಕರು, ಸರ್ಕಾರ, ಕೈಗಾರಿಕಾ ವಲಯ ಮತ್ತು ಸಂಶೋಧಕರಿಗೆ ಉಪಯುಕ್ತ ಮಾರ್ಗದರ್ಶಿಯಾಗಲಿದೆ ಎಂದು ಅಶೋಕ್ ಕುಮಾರ್ ಲಹಿರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

---

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ. ವೀರೇಂದ್ರ ಕುಮಾರ್ ನವದೆಹಲಿಯಲ್ಲಿಂದು ನಡೆಯಲಿರುವ ಹಿರಿಯ ನಾಗರಿಕರ ರಾಷ್ಟ್ರೀಯ ಮಂಡಳಿಯ ೫ನೇ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಭೆಯಲ್ಲಿ, ಹಿರಿಯ ನಾಗರಿಕರ ಕಲ್ಯಾಣಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಮಂಡಳಿ ಚರ್ಚಿಸಲಿದೆ. ಈ ಚರ್ಚೆಗಳು ಅಂತರ-ಸಚಿವಾಲಯದ ಸಮನ್ವಯವನ್ನು ಮತ್ತಷ್ಟು ಬಲಪಡಿಸುವ ಮತ್ತು ಹಿರಿಯ ನಾಗರಿಕರಿಗೆ ಘನತೆ, ಭದ್ರತೆ, ಭಾಗವಹಿಸುವಿಕೆ ಮತ್ತು ಯೋಗಕ್ಷೇಮದ ಜೀವನವನ್ನು ಖಾತ್ರಿಪಡಿಸುವ ಕಡೆಗೆ ಸರ್ಕಾರದ ಬದ್ಧತೆಯನ್ನು ಬಲಪಡಿಸುವ ನಿರೀಕ್ಷೆಯಿದೆ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ತಿಳಿಸಿದೆ.

---

ಪಂಜಾಬ್‌ನ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಿರೋಮಣಿ ಅಕಾಲಿ ದಳದ ಅಧ್ಯಕ್ಷ ಸುಖ್ಬೀರ್ ಸಿಂಗ್ ಬಾದಲ್ ಅವರು ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಹಾಗೂ ಅಪಾಯದಿಂದ ಪಾರಾಗಿದ್ದಾರೆ.

ಬಾದಲ್ ಮತ್ತು ಅವರ ಪತ್ನಿ ಹರ್ಸಿಮ್ರತ್ ಕೌರ್ ನಿನ್ನೆ ನಾಂದೇಡ್‌ನ ಮುಗತ್‌ನಲ್ಲಿರುವ ಗುರುದ್ವಾರ ಮಾತಾ ಸಾಹಿಬ್ ದೇವಾನ್ ಜಿ ಅವರನ್ನು ಭೇಟಿ ಮಾಡುತ್ತಿದ್ದಾಗ, ವ್ಯಕ್ತಿಯೊಬ್ಬ ಬಾದಲ್ ಅವರನ್ನು ಚಾಕುವಿನಿಂದ ಇರಿದಿದ್ದಾನೆ. ಪೊಲೀಸ್ ಅಧಿಕಾರಿಗಳು ಮಧ್ಯಪ್ರವೇಶಿಸಿ ಅವನನ್ನು ಬಂಧಿಸಿದರು.

---

ನೈಜೀರಿಯಾದ ಲಾಗೋಸ್‌ನಲ್ಲಿ ನಡೆದ ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ೩೫ ಪದಕಗಳನ್ನು ಗೆಲ್ಲುವ ಮೂಲಕ ಕೂಟದ ಚಾಂಪಿಯನ್‌ಆಗಿ ಹೊರಹೊಮ್ಮಿದೆ. ನಾಲ್ಕು ದಿನಗಳ ಸ್ಪರ್ಧೆಯಲ್ಲಿ ಭಾರತೀಯ ತಂಡ ೧೩ ಚಿನ್ನ, ೮ ಬೆಳ್ಳಿ ಮತ್ತು ೧೪ ಕಂಚಿನ ಪದಕಗಳನ್ನು ಗೆದ್ದಿದೆ.

೨೩ ವರ್ಷದೊಳಗಿನವರ ಹಾಗೂ ಹಿರಿಯರ ವಿಭಾಗಗಳಲ್ಲಿ ಭಾರತ ಈ ಸಾಧನೆ ಮಾಡಿದೆ. ಅಂತಿಮ ದಿನ ಹಿರಿಯರ ವಿಭಾಗದಲ್ಲಿ ಭಾರತ ೬ ಸ್ಪರ್ಧೆಗಳ ಪೈಕಿ ೫ರಲ್ಲಿ ಚಿನ್ನದ ಪದಕ ಗೆದ್ದಿದ್ದು, ಪುರುಷರ ಸೆಬರ್, ಮಹಿಳೆಯರ ಸೆಬರ್, ಪುರುಷರ ಎಪಿ, ಮಹಿಳೆಯರ ಎಪಿ ಮತ್ತು ಮಹಿಳೆಯರ ಫಾಯಿಲ್ ವಿಭಾಗಗಳಲ್ಲಿ ಚಿನ್ನ ಹಾಗೂ ಪುರುಷರ ಫಾಯಿಲ್‌ನಲ್ಲಿ ಬೆಳ್ಳಿ ಪದಕ ಗಳಿಸಿದೆ.

ಈ ಸಾಧನೆಯೊಂದಿಗೆ ಅತ್ಯುತ್ತಮ ಒಟ್ಟಾರೆ ಫಲಿತಾಂಶ ದಾಖಲಿಸಿದ ದೇಶಕ್ಕೆ ನೀಡಲಾಗುವ ವಿಲ್ಕಿನ್ಸನ್ ಸ್ವೋರ್ಡ್ ಟ್ರೋಫಿಯನ್ನೂ ಭಾರತ ಪಡೆದುಕೊಂಡಿದೆ. ಕಾಮನ್‌ವೆಲ್ತ್ ಒಟ್ಟಾರೆ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಭಾರತ ಮೊದಲ ಬಾರಿಗೆ ಗೆದ್ದಿರುವುದು ಭಾರತೀಯ ಫೆನ್ಸಿಂಗ್ ಕ್ರೀಡಾಪಟುಗಳ ಪ್ರತಿಭೆ, ಶಿಸ್ತು ಮತ್ತು ಪರಿಶ್ರಮಕ್ಕೆ ಸಾಕ್ಷಿಯಾಗಿದೆ ಎಂದು ಫೆನ್ಸಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಹೇಳಿದ್ದಾರೆ.

__________ ಮುಕ್ತಾಯ __________